ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 04-12-1991.

# *ಸಫಲ ತಪಸ್ವಿಗಳು ಅರ್ಥಾತ್ ಪವಿತ್ರತೆಯ ವ್ಯಕ್ತಿತ್ವ ಹಾಗೂ ಘನತೆಯುಳ್ಳವರು*

(सफल तपस्वी अर्थात् प्योरिटी की पर्सनैलिटी और रॉयल्टी वाले)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಅವ್ಯಕ್ತ ಬಾಪ್‌ದಾದಾ ತನ್ನ ತಪಸ್ವೀ ಮಕ್ಕಳೊಂದಿಗೆ ಮಾತನಾಡುತ್ತಿದ್ದಾರೆ.**

ಇಂದು ನಾಲ್ಕಾರು ಕಡೆಯ ತಪಸ್ವೀ ಮಕ್ಕಳ ನೆನಪು ಬಾಪ್‌ದಾದಾರವರ ಬಳಿ ತಲುಪುತ್ತಿದೆ. ಕೆಲವರು ಸಾಕಾರದಲ್ಲಿ ಸನ್ಮುಖ ನೆನಪಿನ ರಿಟರ್ನ್ ಆಗಿ ಮಿಲನವನ್ನು ಆಚರಿಸುತ್ತಿದ್ದಾರೆ. ಇನ್ನೂ ಕೆಲವರು ಆಕಾರಿರೂಪದಲ್ಲಿ ನೆನಪು ಮತ್ತು ಮಿಲನದ ಅನುಭವ ಮಾಡುತ್ತಿದ್ದಾರೆ. ಬಾಪ್‌ದಾದಾ ಎರಡೂ ರೂಪದ ಮಕ್ಕಳನ್ನು ನೋಡುತ್ತಿದ್ದೇವೆ. ಇಂದು ಅಮೃತವೇಳೆ ಬಾಪ್‌ದಾದಾ ಮಕ್ಕಳ ತಪಸ್ಸಿನ ಪ್ರತ್ಯಕ್ಷ ಸ್ವರೂಪವನ್ನು ನೋಡುತ್ತಿದ್ದೆವು. ಪ್ರತಿಯೊಬ್ಬ ಮಗು ತಮ್ಮ ಪುರುಷಾರ್ಥದ ಪ್ರಮಾಣ ತಪಸ್ಸು ಮಾಡುತ್ತಿದ್ದಾರೆ. ಲಕ್ಷ್ಯವೂ ಇದೆ ಮತ್ತು ಉಮ್ಮಂಗವೂ ಇದೆ. ಎಲ್ಲರೂ ತಪಸ್ವಿಗಳಾಗಿದ್ದಾರೆ ಏಕೆಂದರೆ ಬ್ರಾಹ್ಮಣ ಜೀವನದ ವಿಶೇಷತೆಯೇ ತಪಸ್ಸಾಗಿದೆ. **ತಪಸ್ಸು ಅರ್ಥಾತ್ ಒಬ್ಬರ ಲಗನ್ನಿನಲ್ಲಿ ಮಗ್ನರಾಗಿರುವುದು.** ಸಫಲ ತಪಸ್ವಿಗಳು ಬಹುಕಡಿಮೆ ಇದ್ದಾರೆ. ಪುರುಷಾರ್ಥಿ ತಪಸ್ವಿಗಳು ಬಹಳಮಂದಿಯಿದ್ದಾರೆ. **ಸಫಲ ತಪಸ್ವಿಯ ಚಿಹ್ನೆಯೇನೆಂದರೆ ಅವರ ಚಹರೆ ಮತ್ತು ಚಲನೆಯಲ್ಲಿ ಪವಿತ್ರತೆಯ ವ್ಯಕ್ತಿತ್ವ ಹಾಗೂ ಪವಿತ್ರತೆಯ ಘನತೆಯು ಸ್ಪಷ್ಟ ಅನುಭವವಾಗುವುದು. ತಪಸ್ಸಿನ ಅರ್ಥವೇ ಆಗಿದೆ- ಮನ-ವಚನ-ಕರ್ಮ ಹಾಗೂ ಸಂಬಂಧ- ಸಂಪರ್ಕದಲ್ಲಿ ಅಪವಿತ್ರತೆಯ ಅಂಶಮಾತ್ರವೂ ಸಹ ವಿನಾಶವಾಗುವುದು. ಹೆಸರು-ಗುರುತೂ ಸಮಾಪ್ತಿಯಾಗುವುದು, ಯಾವಾಗ ಅಪವಿತ್ರತೆಯು ಸಮಾಪ್ತಿಯಾಗಿಬಿಡುತ್ತದೆಯೋ ಆಗ ಈ ಸಮಾಪ್ತಿಯನ್ನೇ ಸಂಪನ್ನಸ್ಥಿತಿಯೆಂದು ಹೇಳಲಾಗುತ್ತದೆ. ಸಫಲ ತಪಸ್ವಿ ಅರ್ಥಾತ್ ಸದಾ ಸ್ವತಹ ಪವಿತ್ರತೆಯ ವ್ಯಕ್ತಿತ್ವ ಮತ್ತು ಘನತೆಯು ಪ್ರತಿಮಾತು ಮತ್ತು ಕರ್ಮದಿಂದ, ದೃಷ್ಟಿ ಹಾಗೂ ವೃತ್ತಿಯಿಂದ ಅನುಭವವಾಗಲಿ, ಪವಿತ್ರತೆಯೆಂದರೆ ಕೇವಲ ಬ್ರಹ್ಮಚರ್ಯವಲ್ಲ, ಸಂಪೂರ್ಣ ಪವಿತ್ರತೆ. ಅರ್ಥಾತ್ ಸಂಕಲ್ಪದಲ್ಲಿಯೂ ಯಾವುದೇ**

**ವಿಕಾರವು ಸ್ಪರ್ಶಿಸದಿರಲಿ. ಹೇಗೆ ಬ್ರಾಹ್ಮಣ ಜೀವನದಲ್ಲಿ ಶಾರೀರಿಕ ಆಕರ್ಷತೆ ಅಥವಾ ಶರೀರ ಸ್ಪರ್ಶವನ್ನು ಅಪವಿತ್ರತೆಯೆಂದು ತಿಳಿಯುತ್ತೀರೋ ಹಾಗೆಯೇ ಮನಸ್ಸು-ಬುದ್ಧಿಯಲ್ಲಿ ಯಾವುದೇ ವಿಕಾರದ ಸಂಕಲ್ಪ ಮಾತ್ರದ ಆಕರ್ಷಣೆ ಅಥವಾ ಸ್ಪರ್ಶಕ್ಕೂ ಅಪವಿತ್ರತೆಯೆಂದು ಹೇಳಲಾಗುವುದು. ಪವಿತ್ರತೆಯ ವ್ಯಕ್ತಿತ್ವವುಳ್ಳವರು, ಘನತೆಯುಳ್ಳವರು ಮನಸ್ಸು-ಬುದ್ಧಿಯಿಂದಲೂ ಸಹ ಈ ಅಸ್ವಚ್ಛತೆಯನ್ನು ಸ್ಪರ್ಶಿಸುವುದಿಲ್ಲ.** ಏಕೆಂದರೆ ಸಫಲ ತಪಸ್ವಿ ಅರ್ಥಾತ್ ಸಂಪೂರ್ಣ ವೈಷ್ಣವರು. ವೈಷ್ಣವರೆಂದಿಗೂ ಅಶುದ್ಧ ವಸ್ತುಗಳನ್ನು ಮುಟ್ಟುವುದಿಲ್ಲ. ಅವರದು ಸ್ಥೂಲವಾಗಿದೆ. ತಾವು ಬ್ರಾಹ್ಮಣ ವೈಷ್ಣವ ಆತ್ಮರದು ಸೂಕ್ಷ್ಮ ವಾಗಿದೆ. ಅಶುದ್ಧತೆಯನ್ನು ಸ್ಪರ್ಶಿಸದೇ ಇರುವುದೇ ತಪಸ್ಸಾಗಿದೆ. ಧಾರಣೆ ಮಾಡಿಕೊಳ್ಳುವುದು ಅರ್ಥಾತ್ ಗ್ರಹಿಸುವುದು. ಇದಂತೂ ಬಹಳ ದೊಡ್ಡ ಮಾತಾಗಿದೆ ಆದರೆ ಸಂಕಲ್ಪದಲ್ಲಿಯೂ ಸ್ಪರ್ಶಿಸಬಾರದು, ಅಂತಹವರಿಗೆ ಸತ್ಯವೈಷ್ಣವರೆಂದು ಹೇಳಲಾಗುತ್ತದೆ. ಕೇವಲ ನೆನಪಿನ ಸಮಯದಲ್ಲಿ ನೆನಪಿನಲ್ಲಿರುವುದಕ್ಕೆ ತಪಸ್ಸು ಎಂದು ಹೇಳಲಾಗುವುದಿಲ್ಲ. ತಪಸ್ಸು ಅರ್ಥಾತ್ ಪವಿತ್ರತೆಯ ವ್ಯಕ್ತಿತ್ವ ಮತ್ತು ಘನತೆಯ ಅನುಭವವನ್ನು ಸ್ವಯಂ ಮಾಡುವುದು ಹಾಗೂ ಅನ್ಯರಿಗೂ ಅನುಭವ ಮಾಡಿಸುವುದಾಗಿದೆ. ಸಫಲ ತಪಸ್ವಿಯ ಅರ್ಥವೇ ವಿಶೇಷ ಮಹಾನ್ ಆತ್ಮರಾಗುವುದಾಗಿದೆ. ವಿಶೇಷ ಆತ್ಮರು ಹಾಗೂ ಮಹಾನ್ ಆತ್ಮರನ್ನು ದೇಶದ ಹಾಗೂ ವಿಶ್ವದ ಆಧಾರವೆಂದು ಹೇಳುತ್ತಾರೆ. ಪವಿತ್ರತೆಯ ವ್ಯಕ್ತಿತ್ವ ಅರ್ಥಾತ್ ಪ್ರತೀಕರ್ಮದಲ್ಲಿ ಮಹಾನತೆ ಹಾಗೂ ವಿಶೇಷತೆ. ವ್ಯಕ್ತಿತ್ವ ಅರ್ಥಾತ್ ಸದಾ ಸ್ವಯಂ ಹಾಗೂ ಅನ್ಯರ ಸೇವೆಯಲ್ಲಿ ಸದಾ ಬ್ಯುಜಿಯಾಗಿರುವುದು ಅರ್ಥಾತ್ ತಮ್ಮ ಸಮಯ, ಶಕ್ತಿ, ಸಂಕಲ್ಪವನ್ನು ವ್ಯರ್ಥ ಮಾಡದಿರುವುದು ಹಾಗೂ ಸಫಲ ಮಾಡುವುದು. ಅವರಿಗೆ ವ್ಯಕ್ತಿತ್ವವುಳ್ಳವರೆಂದು ಹೇಳಲಾಗುವುದು. ವ್ಯಕ್ತಿತ್ವದವರು ಎಂದಿಗೂ ಚಿಕ್ಕಚಿಕ್ಕ ಮಾತುಗಳಲ್ಲಿ ತಮ್ಮ ಮನ-ಬುದ್ಧಿಯನ್ನು ಬ್ಯುಜಿಯಾಗಿಡುವುದಿಲ್ಲ. ಅಂದಾಗ ಅಪವಿತ್ರತೆಯ ಮಾತುಗಳು ತಾವು " ಶ್ರೇಷ್ಠಾತ್ಮರ ಮುಂದೆ ಚಿಕ್ಕದೋ ಅಥವಾ ದೊಡ್ಡದೋ? ಆದ್ದರಿಂದ ತಪಸ್ವಿ ಅರ್ಥಾತ್ ಇಂತಹ ಮಾತುಗಳನ್ನು ಕೇಳಿಯೂ ಕೇಳದಂತಿರುವವರು. ನೋಡಿಯೂ ನೋಡದಂತಿರುವವರು. ಇಂತಹ ಅಭ್ಯಾಸ ಮಾಡಿದ್ದೀರಾ? ಇಂತಹ ತಪಸ್ಸು ಮಾಡಿದ್ದೀರಾ? ಅಥವಾ ಏನು ಮಾಡುವುದು. ಬಯಸುವುದಿಲ್ಲ ಆದರೆ ಕಾಣಿಸುತ್ತದೆ. ಕೇಳಿಸುತ್ತದೆ ಎಂದು ಆಲೋಚಿಸುತ್ತೀರಾ? ಹೇಗೆ ಯಾವುದೇ ವಸ್ತುವಿನೊಂದಿಗೆ ತಮಗೆ ಸಂಬಂಧವಿಲ್ಲವೆಂದರೆ ಆ ವಸ್ತುಗಳನ್ನು ನೋಡಿಯೂ ನೋಡದಂತಿರುತ್ತೀರಿ ಅಲ್ಲವೆ! **ಹೇಗೆ ದಾರಿಯಲ್ಲಿ ಹೋಗುತ್ತಿರುವಾಗ ಎಲ್ಲಾದರೂ ಏನಾದರೂ ಕಂಡಾಗ ತಮಗೆ ಸಂಬಂಧವಿಲ್ಲದಿದ್ದಾಗ ನೋಡಿಯೂ ನೋಡದಂತಿರುತ್ತೀರಿ, ಅಲ್ಲವೆ. ಅದನ್ನು ಸೈಡ್ ಸೀನ್ ಎಂದು ತಿಳಿದು ಪಾರು ಮಾಡುತ್ತೀರಿ. ಹಾಗೆಯೇ ಯಾವ ಮಾತುಗಳನ್ನು ಕೇಳುತ್ತೀರಿ. ನೋಡುತ್ತೀರಿ ಅವು ತಮ್ಮ ಕೆಲಸಕ್ಕೆ ಬಾರದಿದ್ದರೆ ನೋಡಿಯೂ ನೋಡದಂತಿರಿ, ಕೇಳಿಯೂ ಕೇಳದಂತಿರಿ. ಒಂದುವೇಳೆ ಮನಸ್ಸು-ಬುದ್ದಿಯಲ್ಲಿ ಧಾರಣೆ ಮಾಡಿಕೊಂಡರೆ ಇವರು ಹೀಗಿದ್ದಾರೆ. ಇವರು ಹಾಗಿದ್ದಾರೆ ಎಂಬುದು ಬಂದುಬಿಟ್ಟರೆ ಅಂತಹವರಿಗೆ ವ್ಯರ್ಥ, ಅಶುದ್ಧತೆಯನ್ನು ಸ್ಪರ್ಶಿಸಿದರು ಅರ್ಥಾತ್ ಸತ್ಯವೈಷ್ಣವತನವು ಸಂಪೂರ್ಣರೂಪದಿಂದ ಇಲ್ಲವೆಂದು ಹೇಳಲಾಗುತ್ತದೆ. ಪವಿತ್ರತೆಯ ವ್ಯಕ್ತಿತ್ವದಲ್ಲಿ ಪರ್ಸೆಂಟೇಜ್' ಕಡಿಮೆ ಅರ್ಥಾತ್ ತಪಸ್ಸಿನ ಪರ್ಸೆಂಟೇಜ್ ಕಡಿಮೆಯೆಂದರ್ಥ.** ಅಂದಾಗ ತಪಸ್ಸೆಂದರೇನು ತಿಳಿಯಿತೆ?

ಇದೇ ವಿಧಿಯಿಂದ ತಮ್ಮನ್ನು ತಾವು ಪರಿಶೀಲನೆ ಮಾಡಿಕೊಳ್ಳಿರಿ. ತಪಸ್ಸಿನ ವರ್ಷದಲ್ಲಿ ತಪಸ್ಸಿನ ಪ್ರತ್ಯಕ್ಷಸ್ವರೂಪ ಪವಿತ್ರತೆಯ ವ್ಯಕ್ತಿತ್ವವನ್ನು ಅನುಭವ ಮಾಡುತ್ತೀರಾ? ವ್ಯಕ್ತಿತ್ವವು ಎಂದೂ ಗುಪ್ತವಾಗಿರಲು ಸಾಧ್ಯವಿಲ್ಲ, ಅವಶ್ಯವಾಗಿ ಪ್ರತ್ಯಕ್ಷವಾಗುತ್ತದೆ. ಹೇಗೆ ಸಾಕಾರ ಬ್ರಹ್ಮಾತಂದೆಯನ್ನು ನೋಡಿದಿರಿ- ಪವಿತ್ರತೆಯ ವ್ಯಕ್ತಿತ್ವವನ್ನು ಎಷ್ಟು ಸ್ಪಷ್ಟ ಅನುಭವ ಮಾಡುತ್ತಿದ್ದೀರಿ. ಈ ತಪಸ್ಸಿನ ಅನುಭವದ ಚಿಹ್ನೆಗಳು ಈಗ ತಮ್ಮ ಮೂಲಕ ಅನ್ಯರಿಗೆ ಅನುಭವವಾಗಲಿ. ಚಲನೆ ಹಾಗೂ ಚಹರೆ ಎರಡರ ಮೂಲಕವೂ ಅನುಭವ ಮಾಡಿಸಬಲ್ಲಿರಿ. ಈಗಲೂ ಕೆಲವರು ಅನುಭವ ಮಾಡುತ್ತಾರೆ ಆದರೆ ಈ ಅನುಭವವನ್ನು ಇನ್ನೂ ಸ್ವಯಂನ ಮೂಲಕ ಅನ್ಯರಲ್ಲಿ ಹರಡಿಸಿರಿ. ಇಂದು ವ್ಯಕ್ತಿತ್ವದ ಬಗ್ಗೆ ತಿಳಿಸಿದೆವು. ಮತ್ತೆಂದಾದರೂ ಘನತೆಯ ಬಗ್ಗೆ ತಿಳಿಸುತ್ತೇವೆ.

ಎಲ್ಲರೂ ಮಿಲನವನ್ನು ಆಚರಿಸಲು ಬಂದಿದ್ದಾರೆ ಆದ್ದರಿಂದ ಬಾಪ್‌ದಾದಾರವರೂ ಸಹ ಮಿಲನವನ್ನು ಆಚರಿಸಲು ತಮ್ಮಂತೆ ವ್ಯಕ್ತ ಶರೀರದಲ್ಲಿ ಬರುತ್ತೇವೆ. ಸಮಾನರಾಗಬೇಕಾಗುತ್ತದೆ ಅಲ್ಲವೆ. ತಾವು ಸಾಕಾರದಲ್ಲಿದ್ದೀರಿ ಅಂದಮೇಲೆ ತಂದೆಯೂ ಸಹ ಸಾಕಾರ

ತನುವಿನ ಆಧಾರ ತೆಗೆದುಕೊಳ್ಳಬೇಕಾಗುತ್ತದೆ. ವಾಸ್ತವದಲ್ಲಿ ತಾವು ವ್ಯಕ್ತದಿಂದ ಅವ್ಯಕ್ತರಾಗಬೇಕೋ ಅಥವಾ ಅವ್ಯಕ್ತರು ವ್ಯಕ್ತರಾಗಬೇಕೋ? ಖಾಯಿದೆ ಏನು ಹೇಳುತ್ತದೆ? ಅವ್ಯಕ್ತರಾಗಬೇಕಲ್ಲವೆ?' ಅಂದಮೇಲೆ ಅವ್ಯಕ್ತ ತಂದೆಯನ್ನು ವ್ಯಕ್ತದಲ್ಲಿ ಏಕೆ ತರುತ್ತೀರಿ? ಯಾವಾಗ ತಾವೂ ಅವ್ಯಕ್ತರಾಗಲೇಬೇಕಾಗಿದೆ ಅಂದಮೇಲೆ ಅವ್ಯಕ್ತರನ್ನು ಅವ್ಯಕ್ತವಾಗಿಯೇ ಇರಲು ಬಿಡಬೇಕಲ್ಲವೆ ಆದ್ದರಿಂದ ಅವ್ಯಕ್ತ ಮಿಲನದ ಅನುಭವವನ್ನು ಹೆಚ್ಚಿಸಿಕೊಳ್ಳುತ್ತಾ ಹೋಗಿ. ಅವ್ಯಕ್ತತಂದೆಯೂ ಸಹ ಡ್ರಾಮಾನುಸಾರ ವ್ಯಕ್ತದಲ್ಲಿ ಬರುವುದಕ್ಕಾಗಿ ಬಂಧಿತರಾಗಿದ್ದಾರೆ. ಆದರೆ ಸಮಯ ಪ್ರಮಾಣ, ಪರಿಸ್ಥಿತಿಯ ಪ್ರಮಾಣ ಅವ್ಯಕ್ತ ಮಿಲನದ ಅನುಭವವು ಬಹಳ ಕೆಲಸಕ್ಕೆ ಬರುವುದು ಆದ್ದರಿಂದ ಈ ಅನುಭವವನ್ನು ಇಷ್ಟು ಸ್ಪಷ್ಟ ಮತ್ತು ಸಹಜ ಮಾಡಿಕೊಳ್ಳುತ್ತಾ ಹೋಗಿರಿ ಅದರಿಂದಲೇ ಸಮಯಕ್ಕೆ ಈ ಅವ್ಯಕ್ತ ಮಿಲನವು ಸಾಕಾರದಂತೆಯೇ ಅನುಭವವಾಗಲಿ. ತಿಳಿಯಿತೇ- ಆ ಸಮಯದಲ್ಲಿ ನಮಗಂತೂ ಅವ್ಯಕ್ತ ತಂದೆಯೊಂದಿಗೆ ವ್ಯಕ್ತದಲ್ಲಿ ಮಿಲನ ಮಾಡುವ ಹವ್ಯಾಸವಾಗಿಬಿಟ್ಟದೆ ಎಂದು ಹೇಳುವಂತಿಲ್ಲ. ಎಂತಹ ಸಮಯವೋ ಅದರಂತೆಯೇ ಮಿಲನ ಮಾಡಿರಿ. ತಿಳಿಯಿತೇ-

ಯಾರು ಎಲ್ಲಿಂದಲಾದರೂ ಬಂದಿರಬಹುದು ಆದರೆ ಈ ಸಮಯದಲ್ಲಿ ಎಲ್ಲರೂ ಮಧುಬನ ನಿವಾಸಿಗಳಾಗಿದ್ದೀರಿ ಅಥವಾ ತಮ್ಮನ್ನು ಮಹಾರಾಷ್ಟ್ರ ಅಥವಾ ಒರಿಸ್ಸಾದ ನಿವಾಸಿಯೆಂದು ತಿಳಿಯುತ್ತೀರಾ? ವಾಸ್ತವದಲ್ಲಿ ಮಧುವನ ನಿವಾಸಿಗಳಾಗಿದ್ದೀರಿ. ಕೇವಲ ಸೇವಾರ್ಥವಾಗಿ ಭಿನ್ನ-ಭಿನ್ನ ಸ್ಥಾನಗಳಿಗೆ ಹೋಗಿದ್ದೀರಿ. ಬ್ರಾಹ್ಮಣರು ಅರ್ಥಾತ್ ಮಧುಬನ . ಸೇವಾಸ್ಥಾನಕ್ಕೆ ಹೋಗಿದ್ದೀರಿ ಆದ್ದರಿಂದ ಸೇವಾಸ್ಥಾನವನ್ನು ಇದು ನನ್ನ ಸ್ಥಾನವೆಂದು ಎಂದಿಗೂ ತಿಳಿದುಕೊಳ್ಳಬಾರದು. ಕೆಲ ಮಕ್ಕಳು ಇವರನ್ನು ಬದಲಾಯಿಸಿರಿ ಎಂದು ಹೇಳಿದಾಗ ನಮ್ಮನ್ನು ಪಂಜಾಬ್ ಗೆ ಅಥವಾ ಒರಿಸ್ಸಾಗಿ ಕಳುಹಿಸಿರಿ ಎಂದು ಹೇಳುತ್ತಿದ್ದಾರೆ ನಿಮ್ಮ ನಿಜವಾದ ಸ್ಥಾನ ಪಂಜಾಬ್, ಒರಿಸ್ಸಾ ಆಗಿದೆಯೋ? ಅಥವಾ ಮಧುಬನದವರಾಗಿದ್ದೀರೋ? ಅಂದಮೇಲೆ ನಾವು ಪಂಜಾಬಿನವರಾಗಿದ್ದೇವೆ ಆದ್ದರಿಂದ ನಮ್ಮನ್ನು ಪಂಜಾಬಿಗೆ ಕಳುಹಿಸಿರಿ, ಗುಜರಾತಿನವರಾದ್ದರಿಂದ ಗುಜರಾತಿಗೆ ಕಳುಹಿಸಿರಿ ಎಂದು ಏಕೆ ಹೇಳುತ್ತೀರಿ? ಎಲ್ಲಿಗೆ ಬೇಕಾದರೂ ವರ್ಗಾಯಿತರಾಗಲು ತಯಾರಿದ್ದೀರಾ? ನಿಮಿತ್ತ ಶಿಕ್ಷಕಿಯರೆಲ್ಲರೂ ತಯಾರಿದ್ದೀರಾ? ಯಾರನ್ನು ಎಲ್ಲಿಗೆ ಬೇಕಾದರೂ ವರ್ಗಾವಣೆ ಮಾಡಿದರೆ ಅದಕ್ಕಾಗಿ ತಯಾರಿದ್ದೀರಾ? ನೋಡಿ, ದಾದಿಯು ಎಲ್ಲರಿಗೆ ಇಲ್ಲವೆಂಬ ಸರ್ಟಿಫಿಕೇಟ್ ಕೊಡುತ್ತಿದ್ದಾರೆ. ಒಳ್ಳೆಯದು- ಇದನ್ನೂ ಸಹ ಮುಂದೆ ಮಾಡುತ್ತೇವೆ. ಯಾರು ವರ್ಗಾಯಿತರಾಗಲು ತಯಾರಿದ್ದಾರೆಯೋ ಅವರೇ ಮಿಲನಕ್ಕೆ ಬನ್ನಿರಿ, ಸೇವಾಕೇಂದ್ರಕ್ಕೆ ಹೋಗಿ. ಒಂದುವೇಳೆ ಇರದೇ ಇದ್ದರೆ ಇವರದೇನಾಗುವುದೋ ಅಥವಾ ನನ್ನದೇನಾಗುವುದೋ ಎಂದು ಆಲೋಚಿಸುತ್ತೀರಾ?. ಅಲ್ಪಸ್ವಲ್ಪ ದೂರ ಸರಿಯಬೇಕು. ಬಾಪ್‌ದಾದಾರವರಿಂದ ತಪಸ್ಸಿನ ಬಹುಮಾನವನ್ನು ತೆಗೆದುಕೊಳ್ಳಲು ಬಯಸುತ್ತೀರಿ ಮತ್ತು ಬಾಪ್‌ದಾದಾರವರಿಗೆ ತಪಸ್ಸಿನ ಬಹುಮಾನವನ್ನು ಕೊಡುವುದಕ್ಕೂ ಬಯಸುತ್ತೀರೋ ಅಥವಾ ತೆಗೆದುಕೊಳ್ಳಲು ಬಯಸುತ್ತೀರಾ? ಎಲ್ಲಾ ಸೇವಾಕೇಂದ್ರಗಳಿಂದ ಸಮರ್ಪಿತರಾಗಿ ಬನ್ನಿರಿ. ಹೊಸಮನೆಯಲ್ಲಿ ಆಸಕ್ತಿಯಿದೆಯೇ? ಪರಿಶ್ರಮಪಟ್ಟು ಕಟ್ಟಿಸಿದ್ದೀರಲ್ಲವೆ! ಎಲ್ಲಿ ನನ್ನತನವಿರುವುದು ಅಲ್ಲಿ ತಪಸ್ಸು ಎಂದು ಯಾವುದಕ್ಕೆ ಹೇಳಲಾಗುತ್ತದೆ? ತಪಸ್ಸು ಅರ್ಥಾತ್ ನಿನ್ನದು ಮತ್ತು ತಪಸ್ಸು ಭಂಗವಾಗುವುದು ಎಂದರೆ ನನ್ನದು ಎಂಬುದಾಗಿದೆ. ತಿಳಿಯಿತೇ? ಇವರೆಲ್ಲರೂ ಚಿಕ್ಕಚಿಕ್ಕ ಶಿಕ್ಷಕಿಯರಾಗಿದ್ದಾರೆ ಆದ್ದರಿಂದ ಎಲ್ಲಿ ಕಳುಹಿಸಿದರೂ ಪರವಾಗಿಲ್ಲವೆಂದು ಹೇಳುತ್ತಾರೆ ಆದರೆ ಹಿರಿಯರಿಗೆ ಸ್ವಲ್ಪ ಯೋಚಿಸಬೇಕಾಗುತ್ತದೆ ಮತ್ತು ಯಾರು ಸೇವಾಕೇಂದ್ರಕ್ಕೆ ಬರುವ ಸಹೋದರ-ಸಹೋದರಿಯರಿದ್ದಾರೆಯೋ ಅವರೂ ಸಹ ನಮ್ಮ ಶಿಕ್ಷಕಿ ಸಹೋದರಿಯು ಹೊರಟುಹೋಗುವರೆಂದು ಆಲೋಚಿಸುತ್ತಾರೆ ಅಂದಾಗ ತಾವೆಲ್ಲರೂ ಎವರೆಡಿಯಾಗಿದ್ದೀರಾ? ಯಾರು ಎಲ್ಲಿ ಬೇಕಾದರೂ ಹೋಗಿ ಸೇವೆ ಮಾಡಲಿ ಎನ್ನುವಂತಿದ್ದೀರಾ? ಅಥವಾ ನಮಗೆ ಇವರೇ ಬೇಕೆಂದು ಹೇಳುತ್ತೀರಾ? ಯಾವುದೇ ಸಹೋದರಿಯರು ಬರಲಿ, ನಾವು ಅದರಲ್ಲಿಯೇ ಖುಷಿಪಡುತ್ತೇವೆ ಎನ್ನುವವರು ಕೈಯೆತ್ತಿರಿ. ಯಾವುದೇ ಶಿಕ್ಷಕಿಯರು ಬರಲಿ ಅದಕ್ಕಾಗಿ ಬಾಪ್‌ದಾದಾ ಜವಾಬ್ದಾರರಾಗಿದ್ದಾರೆ ಮತ್ತು ದಾದಿ- ದೀದಿಯರು ಜವಾಬ್ದಾರರಾಗಿದ್ದಾರೆ ಎನ್ನುವವರು ಕೈಯೆತ್ತಿರಿ. ಈಗ ಈ ಟಿ.ವಿ.ಯಲ್ಲಿ ಎಲ್ಲರ ಭಾವಚಿತ್ರವನ್ನು ತೆಗೆಯಲಾಯಿತಲ್ಲವೆ. ನಂತರ ನೋಡುತ್ತೇವೆ- ಅಂತಿಮ ಪರೀಕ್ಷೆಯ ಪ್ರಶ್ನೆಯು ಇದೇ ಬರುವುದು ನಷ್ಟಮೋಹ ಸ್ಮೃತಿಸ್ವರೂಪ. ಆದ್ದರಿಂದ ಅಂತಿಮ ಪರೀಕ್ಷೆಗಾಗಿ ಎಲ್ಲರೂ ತಯಾರಾಗಲೇಬೇಕಾಗಿದೆ. ರಿಹರ್ಸಲ್ ಮಾಡುತ್ತೇವೆ. ಜೋನ್ ಸಂಚಾಲಕರನ್ನೂ ಸಹ

ವರ್ಗಾಯಿಸುತ್ತೇವೆ. ಸಹೋದರರನ್ನೂ ವರ್ಗಾಯಿಸುತ್ತೇವೆ. ತಮ್ಮದೇನಿದೆ? ಬಾಪ್‌ದಾದಾ ಕೊಟ್ಟರು ಮತ್ತು ಬಾಪ್‌ದಾದಾ ತೆಗೆದುಕೊಂಡರು. ಎಲ್ಲರೂ ಎವರೆಡಿಯಾಗಿದ್ದೀರಿ. ಒಳ್ಳೆಯದು- ಆದ್ದರಿಂದ ಈಗ ಕೇವಲ ಕೈಯೆತ್ತಿರುವುದಕ್ಕೆ ಶುಭಾಷಯಗಳು.

**ನಾಲ್ಕಾರು ಕಡೆಯ ಸಫಲ ತಪಸ್ವೀ ಆತ್ಮರಿಗೆ, ಸದಾ ಪವಿತ್ರತೆಯ ವ್ಯಕ್ತಿತ್ವದಲ್ಲಿ ಇರುವಂತಹ, ಸದಾ ಪವಿತ್ರತೆಯ ಘನತೆಯಲ್ಲಿರುವವರು, ಸದಾ ಸತ್ಯ ಸಂಪೂರ್ಣ ವೈಷ್ಣವ ಆತ್ಮರು, ಸದಾ ಸಮಯ ಪ್ರಮಾಣ ಸ್ವಯಂನ್ನು ಪರಿವರ್ತನೆ ಮಾಡಿಕೊಳ್ಳುವ ವಿಶ್ವಪರಿವರ್ತಕರು. ಇಂತಹ ಸದಾಯೋಗಿ, ಸಹಜಯೋಗಿ, ಸ್ವತಹಯೋಗಿ ಮಹಾನ್ ಆತ್ಮರಿಗೆ ಬಾಪ್ ದಾದಾರವರ ನೆನಪು- ಪ್ರೀತಿ ಹಾಗೂ ನಮಸ್ತೆ.**

**ಪಾರ್ಟಿಗಳ ಜೊತೆ ಭೇಟಿ:-**ಎಲ್ಲರೂ ತಪಸ್ವಿ ಆತ್ಮರಾಗಿದ್ದೀರಿ - ಈ ರೀತಿ ಅನುಭವ ಮಾಡುತ್ತೀರಾ? ತಪಸ್ಯಾ ಅರ್ಥಾತ್ ಒಬ್ಬ ಬಾಬಾ ಬಿಟ್ಟರೆ ಬೇರೆಯಾರಿಲ್ಲ. ಈ ರೀತಿಯಿದೆಯೇ ಅಥವಾ ಬೇರೆ ಯಾರಾದರೂ ಇದ್ದಾರೆಯೇ. ಈಗಲೂ ಯಾರಾದರೂ ಇದ್ದಾರೆಯೇ? ಒಬ್ಬರನ್ನು ಬಿಟ್ಟರೆ ಬೇರೆ ಯಾರಿಲ್ಲ ಅಥವಾ ಸ್ವಲ್ಪ- ಸ್ವಲ್ಪ ಆಕರ್ಷಣೆಯಿದಿಯೇ? ನಿಮಿತ್ತರಾಗಿ ಸೇವೆ ಮಾಡುವುದು ಬೇರೆ ಮಾತಾಗಿದೆ ಆದರೆ ಎಲ್ಲಿ ಆಕರ್ಷಣೆಯಿರುತ್ತದೆಯೋ, ಭಲೆ ವ್ಯಕ್ತಿಯಲ್ಲಿ, ವೈಭವದಲ್ಲಿ, ಆಕರ್ಷಣೆಯ ಲಕ್ಷಣವಾಗಿದೆ - ಅಲ್ಲಿ ಬುದ್ಧಿಯು ಅವಶ್ಯವಾಗಿ ಹೋಗುತ್ತದೆ. ಮನಸ್ಸು ಅವಶ್ಯವಾಗಿ ಓಡುತ್ತದೆ. ಅಂದಾಗ ಚೆಕ್ ಮಾಡಿಕೊಳ್ಳಿ ಇಡೀ ದಿನ ನನ್ನ ಮನಸ್ಸು ಮತ್ತು ಬುದ್ಧಿಯು ಎಲ್ಲಿ ಓಡುತ್ತದೆ? ತಂದೆ ಮತ್ತು ಸೇವೆಯನ್ನು ಬಿಟ್ಟರೆ ಬೇರೆ ಎಲ್ಲಾದರೂ ಮನಸ್ಸು-ಬುದ್ಧಿ ಹೋಗುತ್ತದೆಯೇ? ಒಂದುವೇಳೆ ಹೋಗುತ್ತದೆ ಎಂದರೆ ಆಕರ್ಷಣೆಯಿದೆ. ಒಂದುವೇಳೆ ವ್ಯವಹಾರನ್ನೂ ಮಾಡುತ್ತೀರಿ, ಏನೇ ಮಾಡುತ್ತೀರೆಂದರೆ ನಿಮಿತ್ತಾರಾಗಿ ಮಾಡಿ. ನನ್ನದಲ್ಲ. ನಮ್ಮದು. ನನ್ನ ಕೆಲಸವಾಗಿದೆ. ನಾನೇ ನೋಡಬೇಕು... ನನ್ನ ಜವಾಬ್ದಾರಿಯಾಗಿದೆ... ಈ ರೀತಿ ಎಂದಾದರೂ ಹೇಳುತ್ತೀರಾ? ಏನು ಮಾಡುವುದು, ನನ್ನ ಜವಾಬ್ದಾರಿಯಾಗಿದೆಯಲ್ಲವೇ, ನಭಾಯಿಸಲೇಬೇಕಾಗುತ್ತದೆಯಲ್ಲವೇ. ಮಾಡಬೇಕಾಗುತ್ತದೆಯಲ್ಲವೇ, ಎಂದಾದರೂ ಹೇಳುತ್ತೀರಾ? ಅಥವಾ ನಮ್ಮದು ನಿಮಗೆ ಅರ್ಪಣೆ. ನನ್ನದು ಎಲ್ಲಿಂದ ಬಂತು? ಅಂದಾಗ ಈ ಮಾತು ಸಹ ಹೇಳಲಾಗುವುದಿಲ್ಲವೇ? ನಾನೇ ನೋಡಬೇಕಾಗುತ್ತದೆ. ನಾನೇ ಮಾಡಬೇಕಾಗುತ್ತದೆ, ನನ್ನದೆಯಾಗಿದೆ. ನಭಾಯಿಸಬೇಕಲ್ಲವೇ... ನನ್ನದು ಎಂದು ಹೇಳುವುದು ಮತ್ತು ಹೊರೆಯಾಗುವುದು. ತಂದೆಯದಾಗಿದೆ. ತಂದೆ ಮಾಡುತ್ತಾರೆ. ನಾನು ನಿಮಿತ್ತನಾಗಿದ್ದೇನೆ ಎಂದಾಗ ಹಗುರತನವಿರುವುದು. ಹೊರೆಯನ್ನು ಎತ್ತುವ ಅಭ್ಯಾಸವಿಲ್ಲ ತಾನೆ? 63 ಜನ್ಮಗಳು ಹೊರೆ ಎತ್ತಿದ್ದೀರಲ್ಲವೇ. ಕೆಲವೊಬ್ಬರಿಗೆ ಹೊರೆ ಎತ್ತುವ ಅಭ್ಯಾಸವಿದೆ. ಹೊರೆ ಎತ್ತದೇ ಇರುವುದಿಲ್ಲ. ಅಭ್ಯಾಸದಿಂದ ವಶರಾಗಿಬಿಡುತ್ತಾರೆ. ನನ್ನದು ಎಂದರೆ ಹೊರೆ ಎತ್ತುವುದು. ತಿಳಿಯಿತೇ? ಸ್ವಲ್ಪ ಸಮಯದಲ್ಲಿ ಕೆಲಸಕ್ಕೆ ಬರುವುದೆಂದು ಪಕ್ಕದಲ್ಲಿ ಎತ್ತಿಟ್ಟಿದ್ದೀರಾ? ಪಾಂಡವರು ಸ್ವಲ್ಪ ಬ್ಯಾಂಕ್ ಬ್ಯಾಲೆನ್ಸ್, ಸ್ವಲ್ಪ ಜೇಬಿನಲ್ಲಿ ಖರ್ಚಿಗೆ ಇಟ್ಟುಕೊಂಡಿದ್ದೀರಾ? ಸ್ವಲ್ಪವೂ ನನ್ನತನವಿಲ್ಲವೇ. ನಾನು ಎಂದರೆ ಮೈಲಿಗೆ. ಎಲ್ಲಿ ನನ್ನತನವಿರುವುದೋ ಅಲ್ಲಿ ವಿಕಾರಗಳ ಮೈಲಿಗೆ ಅವಶ್ಯವಾಗಿ ಇರುವುದು. ನಮ್ಮದು ಇದ್ದರೆ ಏನಾಗುವುದು? ಈಜುತ್ತಿರುತ್ತೇವೆ. ಮುಳುಗುವುದಿಲ್ಲ. ಈಜುವುದರಲ್ಲಿ ಮಜಾ ಬರುತ್ತದೆಯಲ್ಲವೇ! ತಪಸ್ಯಾ ಎಂದರೆ ನಮ್ಮದು. ನನ್ನದಲ್ಲ. ಒಳ್ಳೆಯದು. ಇದು ಈಸ್ಟರ್ನ್ ಜೋನ್ ಆಗಿದೆ. ಸೂರ್ಯ ಉದಯವಾಗುತ್ತಾನೆಯಲ್ಲವೇ. ಈಸ್ಟರ್ನ್ ಜೋನ್‌ನವರ ಜೊತೆ ತಂದೆಯ ಜೊತೆಯ ನೆನಪಾರ್ಥ ಸೂರ್ಯ ಸದಾ ಹೊಳೆಯುತ್ತಾರಲ್ಲವೇ. ಎಲ್ಲರೂ ತಪಸ್ಸಿನಲ್ಲಿ ಸಫಲತೆ ಪ್ರಾಪ್ತಿಮಾಡಿಕೊಳ್ಳುತ್ತಿದ್ದೀರಲ್ಲವೇ. ತಪಸ್ಯಾದಲ್ಲಿ ಸಂತುಷ್ಟವಾಗಿದ್ದರಲ್ಲವೇ? ತಮ್ಮ ಪಾರ್ಟನೊಂದಿಗೆ ಸಂತುಷ್ಟವಾಗಿ ದ್ದೀರಾ? ಅಥವಾ ಈಗ ಆಗಬೇಕಾಗಿದೆಯೋ? ಇದು ಸಹ ಒಂದು ಗಿಫ್ಟ್ (ಉಡುಗೊರೆ) ಆಗಿದೆ. ಉಡುಗೊರೆಯಲ್ಲಿ ಖರ್ಚು ಮಾಡುವ ಅವಶ್ಯಕತೆಯಿಲ್ಲ. ಖರೀದಿ ಮಾಡುವುದರಲ್ಲಿ ಪರಿಕ್ರಮ ಪಡುವ ಅವಶ್ಯಕತೆಯಿಲ್ಲ. ಒಂದಾಗಿದೆ ತಮ್ಮ ಪುರುಷಾರ್ಥ ಮತ್ತು ಇನ್ನೊಂದು ತಂದೆಯಿಂದ ಅನುಭೂತಿಯ ಉಡುಗೊರೆ ಸಿಗುವುದು. ಯಾರು ಎಷ್ಟು ಬೇಕು ಅಷ್ಟು ಮಾಡಬಹುದು. ಪರಿಶ್ರಮ ಕಡಿಮೆ, ನಿಮಿತ್ತ ಮಾತ್ರ ಮತ್ತು ಪ್ರಾಪ್ತಿ ಹೆಚ್ಚು ಮಾಡಿಕೊಳ್ಳಬಹುದು. ಈಗಲೂ ಸಮಯವಿದೆ ವರ್ಷವು ಪೂರ್ಣವಾಗಿಲ್ಲ. ಈಗಲೂ ಯಾರು ತೆಗೆದುಕೊಳ್ಳಬೇಕೆಂದುಕೊಂಡಿದ್ದೀರೋ ತೆಗೆದು ಕೊಳ್ಳಬಹುದು. ಇದಕ್ಕಾಗಿಯೇ ಸಫಲತೆಯ

ಸೂರ್ಯ ಈಸ್ವನಲ್ಲಿ ಬೆಳಗಿಸಿರಿ. ಸದಾ ಎಲ್ಲರೂ ಖುಷಿಯಾಗಿದ್ದೀರಾ ಅಥವಾ ಕೆಲವೊಮ್ಮೆ-ಕೆಲವೊಮ್ಮೆ ಕೆಲವು ಮಾತುಗಳಿಂದ ಖುಷಿಯಿರುವುದಿಲ್ಲವೇ (ನಾಖುಷ್)? ಖುಷಿಯು ಹೆಚ್ಚುತ್ತಾ ಹೋಗುತ್ತದೆ. ಕಡಿಮೆಯಾಗುವುದಿಲ್ಲವೇ? ಮಾಯಾಜೀತರಾಗಿದ್ದೀರಾ ಅಥವಾ ಮಾಯೆಯು ಬಣ್ಣವನ್ನು ತೋರಿಸುತ್ತದೆಯೇ? ಅದು ಎಷ್ಟೇ ಬಣ್ಣವನ್ನು ತೋರಿಸಲಿ, ನಾನು ಮಾಯಾಪತಿಯಾಗಿದ್ದೇನೆ. ಮಾಯೆ ರಚನೆಯಾಗಿದೆ. ನಾನು ಮಾಸ್ಟರ್ ರಚಯಿತನಾಗಿದ್ದೇನೆ. ಆಟವನ್ನು ನೋಡಿ ಆದರೆ ಆಟದಲ್ಲಿ ಸೋಲಬೇಡಿ. ಮಾಯೆ ಎಷ್ಟೇ ಅನೇಕ ಪ್ರಕಾರದ ಆಟವನ್ನು ತೋರಿಸಲಿ, ನಾವು ನೋಡುವಂತಹ ಮನೋರಂಜನೆ ಎಂದು ತಿಳಿದು ನೋಡಿ. ನೋಡುತ್ತಾ, ನೋಡುತ್ತಾ ಸೋಲಬೇಡಿ. ಸಾಕ್ಷಿಯಾಗಿ, ಭಿನ್ನರಾಗಿ ನೋಡುತ್ತಾ ಹೋಗಿ. ಎಲ್ಲರು ತವಸ್ಯದಲ್ಲಿ ಮುಂದೆವರೆಯುವವರು, ಉಡುಗೊರೆ ತೆಗೆದುಕೊಳ್ಳುವವರಾಗಿದ್ದೀರಾ? ಸೇವೆಯು ಚೆನ್ನಾಗಿ ನಡೆಯುತ್ತಿದ್ದೀಯಾ? ಸ್ವಯಂನ ಪುರುಷಾರ್ಥದಲ್ಲಿ ಹಾರುತ್ತೀದ್ದೀರಿ ಮತ್ತು ಸೇವೆಯಲ್ಲಿಯೂ ಹಾರುತ್ತೀದೀರಿ. ಎಲ್ಲರು ಫರ್ಸ್ಟ್ ಆಗಿದ್ದೀರಿ. ಸದಾ ಫರ್ಸ್ಟ್ ಆಗಿರಿ. ಸೆಕೆಂಡ್ ನಲ್ಲಿ ಬರಬಾರದು. ಫರ್ಸ್ಟ್ ಇದ್ದರೆ ಸೂರ್ಯವಂಶಿಗಳಾಗುತ್ತೀರಿ. ಸೆಕೆಂಡ್ ನಲ್ಲಿ ಬಂದರೆ ಚಂದ್ರವಂಶದಲ್ಲಿ ಬರುವಿರಿ. ಫರ್ಸ್ಟ್ ನಂಬರ್ನವರು ಮಾಯಾಜೀತ್ ಅಗುವರು. ಯಾವುದೇ ಸಮಸ್ಯೆಯಿರುವುದಿಲ್ಲ. ಯಾವುದೇ ತೊಂದರೆಯಾಗುವುದಿಲ್ಲ, ಯಾವುದೇ ಪ್ರಶ್ನೆಗಳಿರುವುದಿಲ್ಲ, ಯಾವುದೇ ದುರ್ಬಲತೆಗಳಿರುವುದಿಲ್ಲ. ಫರ್ಸ್ಟ್ ನಂಬರ್ ಅರ್ಥಾತ್ ತೀವ್ರ ಪುರುಷಾರ್ಥ. ಯಾರದು ತೀವ್ರ ಪುರುಷಾರ್ಥವಿರುತ್ತದೆ ಅವರು ಹಿಂದಿರಲು ಸಾಧ್ಯವಿಲ್ಲ. ಸದಾ ಸಾಕ್ಷಿ ಮತ್ತು ಸದಾ ತಂದೆಯ ಜೊತೆ - ಇದನ್ನು ನೆನಪಿಟ್ಟುಕೊಳ್ಳಿ.

ರಿವೈಸ್ ಕೋರ್ಸ್ 04-12-1991.

***ಸಫಲ ತಪಸ್ವಿಗಳು ಅರ್ಥಾತ್ ಪವಿತ್ರತೆಯ ವ್ಯಕ್ತಿತ್ವ ಹಾಗೂ ಘನತೆಯುಳ್ಳವರು.***

ತಪಸ್ಸು ಅರ್ಥಾತ್ ಒಬ್ಬರ ಲಗನ್ನಿನಲ್ಲಿ ಮಗ್ನವಾಗಿರುವುದು. ಸಫಲ ತಪಸ್ವಿಯ ಚಿಹ್ನೆ ಏನೆಂದರೆ ಅವರ ಚಹರೆ ಮತ್ತು ಚಲನೆಯಲ್ಲಿ ಪವಿತ್ರತೆಯ ವ್ಯಕ್ತಿತ್ವ ಹಾಗೂ ಪವಿತ್ರತೆಯ ಘನತೆಯು ಸ್ಪಷ್ಟವಾಗಿ ಅನುಭವವಾಗುವುದು. ತಪಸ್ಸಿನ ಅರ್ಥವೇ ಮನ, ವಚನ, ಕರ್ಮ ಹಾಗೂ ಸಂಬಂಧ ಸಂಪರ್ಕದಲ್ಲಿ ಅಪವಿತ್ರತೆಯ ಅಂಶ ಮಾತ್ರವೂ ಸಹ ವಿನಾಶವಾಗಿರುವುದು. ನಾಮ ರೂಪಗಳು ಸಮಾಪ್ತಿ ಆಗಿರುವುದು. ಯಾವಾಗ ಅಪವಿತ್ರತೆಯು ಸಮಾಪ್ತಿಯಾಗುತ್ತದೆಯೋ ಈ ಸಮಾಪ್ತಿಯನ್ನೇ ಸಂಪನ್ನ ಸ್ಥಿತಿಯೆಂದು ಹೇಳಲಾಗುತ್ತದೆ. ಸಫಲ ತಪಸ್ವಿ ಅರ್ಥಾತ್ ಸದಾ ಸ್ವತಃ ಪವಿತ್ರತೆಯ ವ್ಯಕ್ತಿತ್ವ ಮತ್ತು ಘನತೆಯು ಪ್ರತಿ ಮಾತು, ಕರ್ಮದಿಂದ, ದೃಷ್ಟಿ ಹಾಗೂ ವೃತ್ತಿಯಿಂದ ಅನುಭವವಾಗುತ್ತದೆ. ಪವಿತ್ರತೆ ಎಂದರೆ ಕೇವಲ ಬ್ರಹ್ಮಚರ್ಯವಲ್ಲ. ಸಂಪೂರ್ಣ ಪವಿತ್ರತೆ ಅರ್ಥಾತ್ ಸಂಕಲ್ಪದಲ್ಲಿಯೂ ಯಾವ ವಿಕಾರವೂ ಸ್ಪರ್ಶಿಸದಿರಲಿ. ಹೇಗೆ ಬ್ರಾಹ್ಮಣ ಜೀವನದಲ್ಲಿ ಶಾರೀರಿಕ ಆಕರ್ಷಣೆ ಅಥವಾ ಶಾರೀರಿಕ ಸ್ಪರ್ಶವನ್ನು ಅಪವಿತ್ರತೆಯೆಂದು ತಿಳಿಯುತ್ತಾರೆಯೋ ಹಾಗೆಯೇ ಮನಸ್ಸು, ಬುದ್ಧಿಯಲ್ಲಿ ಯಾವುದೇ ವಿಕಾರದ ಸಂಕಲ್ಪ ಮಾತ್ರದ ಆಕರ್ಷಣೆ ಅಥವಾ ಸ್ಪರ್ಶಕ್ಕೂ ಅಪವಿತ್ರತೆ ಎಂದು ಹೇಳಲಾಗುವುದು. ಪವಿತ್ರತೆಯ ವ್ಯಕ್ತಿತ್ವ ಮತ್ತು ಘನತೆಯುಳ್ಳವರು ಮನಸ್ಸು, ಬುದ್ಧಿಯಿಂದಲೂ ಸಹ ಈ ಅಸ್ವಚತೆಯನ್ನು ಸ್ಪರ್ಶಿಸುವುದಿಲ್ಲ. ಏಕೆಂದರೆ ಸಫಲ ತಪಸ್ವಿ ಅರ್ಥಾತ್ ಸಂಪೂರ್ಣ ವೈಷ್ಣವರು. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಒಬ್ಬರ ಲಗನ್ನಿನಲ್ಲಿ ಮಗ್ನವಾಗಿರುವ ತಪಸ್ಸನ್ನು ಮಾಡುತ್ತಿದ್ದೇನೆ.

2. ನಾನು ಮನಸಾ, ವಾಚಾ, ಕರ್ಮಣಾ, ಸಂಬಂಧ ಸಂಪರ್ಕಗಳಲ್ಲಿ ಅಪವಿತ್ರತೆಯನ್ನು ವಿನಾಶ ಮಾಡಿ ನಾಮರೂಪಗಳನ್ನು ಸಮಾಪ್ತಿ ಮಾಡಿರುವ ಸಂಪನ್ನ ಸ್ಥಿತಿ ಸ್ವರೂಪ. (ಇದನ್ನೇ ತಪಸ್ಸು ಎಂದು ಕರೆಯುತ್ತಾರೆ.)

3. ಪವಿತ್ರತೆಯ ವ್ಯಕ್ತಿತ್ವ ಮತ್ತು ಘನತೆ ನನ್ನ ಪ್ರತಿಯೊಂದು ಮಾತು ಕರ್ಮದಲ್ಲಿ ದೃಷ್ಟಿ ಮತ್ತು ವೃತ್ತಿಯಲ್ಲಿ ಎಲ್ಲರಿಗೂ ಅನುಭವವಾಗುವ ಸಫಲ ತಪಸ್ವಿ ಮೂರ್ತಿ.

4. ನಾನು ಮನಸ್ಸು ಬುದ್ಧಿಯಿಂದ ಕೂಡ ಅಸ್ವಚ್ಛತೆಯನ್ನು ಸ್ಪರ್ಶಿಸದ ಸಂಪೂರ್ಣ ಸತ್ಯವಾದ ವೈಷ್ಣವ ಸ್ವರೂಪ.

5. ನಾನು ನನ್ನ ಶಕ್ತಿ, ಸಮಯ, ಸಂಕಲ್ಪ ಎಲ್ಲವುಗಳನ್ನು ಸದಾ ಸ್ವಯಂ ಮತ್ತು ಇತರರ ಸೇವೆಯಲ್ಲಿ ಬ್ಯುಜಿಯಾಗಿ ಇಟ್ಟುಕೊಂಡ ವ್ಯಕ್ತಿತ್ವ ಉಳ್ಳವನು.

6. ತಪಸ್ವಿಯಾದ ನನಗೆ ಸಂಬಂಧವಿರದ ವಿಷಯಗಳನ್ನು ವಸ್ತುಗಳನ್ನು ಕೇಳುತ್ತಲೂ ಕೇಳದೆ, ನೋಡುತ್ತಲೂ ನೋಡದೆ, ಮಾರ್ಗದಲ್ಲಿನ ದೃಶ್ಯಗಳಂತೆ(ಸೈಡ್ ಸೀನ್) ದಾಟಿದ್ದೇನೆ.

7. ನಾನು ಅವ್ಯಕ್ತ ಮಿಲನವನ್ನು ಸಾಕಾರ ಮಿಲನದ ಸಮಾನವಾಗಿ ಅನುಭವ ಮಾಡಿಕೊಂಡಿರುವ ಅವ್ಯಕ್ತ ಸ್ವರೂಪ.

8. ನಾನು ಸೇವಾರ್ಥವಾಗಿ ವಿವಿದ ಸೇವಾಸ್ಥಾನಗಳಿಗೆ ಹೋಗುವ ಮಧುವನ ನಿವಾಸಿ.

9. ನಾನು ಬಾಪ್‌ದಾದಾರವರಿಂದ ತಪಸ್ಸಿನ ಬಹುಮಾನವನ್ನು ಪಡೆಯುವುದರೊಂದಿಗೆ ಬಾಪ್‌ದಾದಾರವರಿಗೂ ತಪಸ್ಸಿನ ಬಹುಮಾನವನ್ನು ಕೊಟ್ಟಿದ್ದೇನೆ.